## ಕಲೆಯಲ್ಲಿ ಅರಳಿದ ಕಲ್ಯಾಣದರಸ



ಅಪರೂಪದ ಕಲಾತ್ಮಕ ಕೆತ್ತನೆಯ ವಾಸ್ತು ಶಿಲ್ಪವೊಂದು ಹೂವಿನ ಹಡಗಲಿ ತಾಲ್ಲೂಕಿನ ಕುರುವತ್ತಿ ದೇವಾಲಯದಲ್ಲಿದೆ. ಇಲ್ಲಿನ ನವರಂಗದಲ್ಲಿ ಕಲ್ಯಾಣಿ ಚಾಲುಕ್ಯ ದೊರೆ ಒಂದನೇ ಸೋಮೇಶ್ವರ ಆತನ ಪತ್ನಿಯರ ಅಪರೂಪದ ಶಿಲ್ಪವೊಂದಿದೆ. ಅತ್ಯಂತ ಕಲಾತ್ಮಕವಾಗಿರುವ ಈ ಶಿಲ್ಪದಲ್ಲಿ ಅವನ ಜೊತೆಯಲ್ಲಿ ಅತನ ಪತ್ನಿಯರಾದ ಬಾಚಲದೇವಿ, ಚಂದ್ರಲಾದೇವಿ (ಚಂದ್ರಿಕಾದೇವಿ), ಮೈಳಲಾದೇವಿ ಹಾಗೂ ಕೇತಲಾದೇವಿಯರು ಇದ್ದಾರೆ. ಸುಮಾರು 4 ರಿಂದ 5 ಅಡಿ ಎತ್ತರದಲ್ಲಿದೆ. ದೊರೆ ಕುಳಿತಿರುವ ಭಂಗಿಯಲ್ಲಿದ್ದು ಒಂದು ಕಾಲು ಮಡಿಚಿಕೊಂಡಿದ್ದಾನೆ. ಇಬ್ಬರು ರಾಣಿಯರ ಕುಳಿತ್ತಿದ್ದರೆ ಮತ್ತಿಬ್ಬರು ರಾಜನಿಗೆ ಆಸರೆಯಾಗಿ ನಿಂತಿದ್ದಾರೆ. ದೊರೆಯ ಮೇಲಿನ ಚಾಮರ, ಪ್ರಭಾವಳಿ ಹಾಗು ಕೀರ್ತಿಮುಖ ಗಮನ ಸೆಳೆಯುತ್ತದೆ. ಇದರ ಹಿಂಭಾಗದಲ್ಲಿ ಶಾಸನವಿದೆ. ತನ್ನ ಆರೋಗ್ಯ ಹಾಗೂ ರಾಜಕೀಯ ಬೇಸರದಿಂದ ತುಂಗಭದ್ರಾ ನದಿಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಾನೆ.

—ಶ್ರೀನಿವಾಸ ಮೂರ್ತಿ ಎನ್.ಎಸ್., ಬೆಂಗಳೂರು



## ಅಬ್ಬಾ ಕಳ್ಳಿ!

ಕ್ಯಾಕ್ಟೇಸಿ ಕುಟುಂಬಕ್ಕೆ ಸೇರಿದ ಕಳ್ಳಿಗಿಡಗಳಲ್ಲಿ ನೂರಾರು ಜಾತಿಗಳು. ಈಗೀಗ ನಾನಾಬಣ್ಣಗಳ ಸುಂದರ ಆಕೃತಿಯ ಮೈತುಂಬ ಮುಳ್ಳುಗಳನ್ನು ಹೊದ್ದುಕೊಂಡಿರುವ ಕ್ಯಾಕ್ಟಸ್ ಗಿಡಗಳನ್ನು ಕುಂಡಗಳಲ್ಲಿ ಬೆಳೆಸಿ ಬಾಲ್ಕನಿಗಳಲ್ಲಿ ಅಲಂಕಾರಿಕವಾಗಿ ಇಡುವ ಟ್ರೆಂಡ್ ಬೆಳೆಯುತ್ತಿದೆ. ಅವುಗಳಲ್ಲಿ ಮನಸೆಳೆಯುವ ಹೂಗಳು ಅರಳುತ್ತವೆ. ಚಿತ್ರದಲ್ಲಿರುವ ಗಜಗಾತ್ರದ ಕಳ್ಳಿಗಿಡ ಗುಡ್ಡಕಾಡುಗಳಲ್ಲಿ ತಾನಾಗಿ ಬೆಳೆಯುವ ಕಾಡುಜಾತಿಗೆ ಸೇರಿದ್ದು. ಇದರ ಕಾಂಡದಲ್ಲಿಯೂ ಮುಳ್ಳುಗಳಿದ್ದು ಕಡಿದರೆ ಬಿಳಿಹಾಲಿನಂತಹ ದ್ರವ ಸೋರುತ್ತದೆ. ಪೂನಾ ಜಿಲ್ಲೆಯಲ್ಲಿರುವ ಪ್ರವಾಸಿ ಸ್ಥಳ ಪೌನಾ ಕೆರೆದಂಡೆಯ ಮೇಲೆ ಹುಲುಸಾಗಿ ಬೆಳೆದ ಈ ಕಳ್ಳಿಗಿಡ ಅಲ್ಲಿ ಬಂದವರೆಲ್ಲರ ಗಮನ ಸೆಳೆಯುತ್ತಿತ್ತು.

—ಧರ್ಮಾನಂದ ಶಿರ್ವ, ಬೆಂಗಳೂರು

## ನೆರಳು ಬೆಳಕಿನಾಟದ ಛಾಯೆ

‘ಬೇಲೂರ ಗುಡಿಯಲ್ಲಿ ಕೇಶವನೇದುರಲ್ಲಿ... ಶಿಲೆಗಳು ಸಂಗೀತವಾ ಹಾಡಿದೆ...’ (ರಥ ಸಪ್ತಮಿ) ಹಾಗೆಯೇ ‘ಕಲ್ಲಾದರೆ ನಾನು ಬೇಲೂರಿನ ಗುಡಿಯಲಿ ಇರುವೆ...’ (ಸಿಂಹಾದ್ರಿಯ ಸಿಂಹ) ಚಲನಚಿತ್ರದ ಇಂಪಾದ ಹಾಡುಗಳ ಸುಳಿವಿನ ನಂತರವೂ ಈ ಛಾಯಾಚಿತ್ರದಲ್ಲಿನ ವಿಶೇಷತೆ... ಗುರುತಿಸುವುದು ಕಷ್ಟ ಎಂದೆನಿಸುತ್ತದೆ. ಇದು ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಕ್ಲಿಕ್ಕಿಸಿದ ಛಾಯಾಚಿತ್ರ.

‘ರವಿ ಕಾಣದ್ದನ್ನು ಕವಿ ಕಂಡ.... ಕವಿ ಕಾಣದ್ದನ್ನು ಕ್ಯಾಮೆರಾ ಕಂಡಿತು...’ ಎಂಬ ಮಾತಿನಂತೆ ಕ್ಯಾಮೆರಾದಲ್ಲಿ ಸೆರೆ ಹಿಡಿದ ಅದ್ಭುತ ಶಿಲ್ಪ ಕಲಾಕೃತಿಯೊಂದಿಗೆ ‘ನೆರಳು ಬೆಳಕಿನಾಟದ ಛಾಯೆ’ ಗಮನಿಸಿ ನೋಡಿ. ನಕ್ಷತ್ರಾಕಾರದ ವೇದಿಕೆಯ ಮೇಲೆ ನಿರ್ಮಿತವಾದ ಚೆನ್ನಕೇಶವ ದೇವಾಲಯದ ಸುತ್ತಲಷ್ಟೇ ಅಲ್ಲದೆ ನೆಲಮಟ್ಟದಿಂದ ಮೇಲ್ಛಾವಣಿಯವರೆಗೆ ಸುಕ್ಷ್ಮಾತಿಸೂಕ್ಷ್ಮ ಚಿತ್ತಾಕರ್ಷಕ ವೈವಿಧ್ಯಮಯ ಶಿಲ್ಪಕಲಾಕೃತಿಗಳನ್ನು ನೋಡುತ್ತಾ ಸಾಗಿದರೆ ನೆರಳು ಬೆಳಕಿನಾಟದ ಛಾಯೆ ಯಾರ ಗಮನಕ್ಕೆ ಬಾರದು. ನನ್ನ ಕುಟುಂಬದ ಸದಸ್ಯರ ಛಾಯಾಚಿತ್ರ ತೆಗೆಯಲು ಮೊಬೈಲ್ ಕ್ಯಾಮೆರಾ ಸ್ಕ್ರೀನ್ ಮೇಲೆ ಕಾಣ್ಣಾಡಿಸುತ್ತಿದ್ದಂತೆ ನನ್ನ ಗಮನಕ್ಕೆ ಬಂದಿದ್ದು ಯಾರದೋ ನೆರಳು....ಅದರಲ್ಲೂ.. ಮಾನವನ ಆಕೃತಿಯ ಹಣೆ, ಮೂಗು, ತುಟಿ ಹಾಗೂ ಗದ್ದದಂತಿದ್ದ ನೆರಳಿನ ಛಾಯೆ.... ಅದನ್ನು ಗಮನಿಸಿತ್ತಿದ್ದಂತೆ... ವಾವ್....ಅದಕ್ಕೆ ತಾನೇ ‘ರವಿ ಕಾಣದ್ದನ್ನು ಕವಿ ಕಂಡನಂತೆ... ಕವಿ ಕಾಣದ್ದನ್ನು ಕ್ಯಾಮೆರಾ ಕಂಡಿತು...’ ಎಂಬ ಮಾತುಗಳು ಸೃಷ್ಟಿ ಆಗಿರಬೇಕು.

ಏನೇ ಆಗಲಿ ನೆರಳು ಬೆಳಕಿನಾಟದ ಛಾಯೆ ಒಂದು ಅದ್ಭುತವೇ ಸರಿ... ಇಂಥ ಅನುಭವ ಬೇಲೂರು ದೇವಾಲಯದ ಛಾಯಾಚಿತ್ರ ಸೆರೆಹಿಡಿಯಲು ಬಂದಂತಹ ಸಹಸ್ರಾರು ಛಾಯಾಗ್ರಾಹಕರಿಗೂ ಅರಿವಿಗೆ ಬಂದಿರಲಿಕ್ಕಿಲ್ಲ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

